ಆ) ವಿಾಸಲಾತಿಯಲ್ಲಿ ಆಯ್ಕೆಯಾದವರ ಹಾಗೂ ಜನರಲ್ ಮೆರಿಟ್‌ನಲ್ಲಿ ಆಯ್ಕೆಯಾದವರ ವಿವರ ಈ ರೀತಿ ಇದೆ.

		ಮಂಖ್ಯೆ ಪಟ್ಟಿ	ಹೆಚ್ಚುವರಿ ಪಟ್ಟಿ
೧.	ಜನರಲ್ ಮೆರಿಟ್	೨೨	೧೫
೨.	ಬಿಎಸ್‌ಜಿ	೧೬	೮
೩.	ಬಿಸಿಎಂ	೧೯	೧೦
೪.	ಬಿಸಿಟಿ	೧೦	೪
೫.	ಬಿ.ಟಿ.	೫	—
೬.	ಎಸ್.ಟಿ.	೧	—
೭.	ಮಾಜಿ ಸೈನಿಕ	೧	—

ಇ) ಈ ಹುದ್ದೆಗಳನ್ನು ಕರ್ನಾಟಕ ರಾಜ್ಯಸರ್ಕಾರಿ ಸೇವಾ (ನೇರ ನೇಮಕಾತಿ ಆಯ್ಕೆ) ನಿಯಮಾವಳಿ ೧೯೭೩ರ ನಿಯಮ ೭ರಂತೆ ಆಯ್ಕೆ ಮಾಡಲಾಗಿದೆ. ಗುಲ್ಬರ್ಗಾ ವಿಶ್ವವಿದ್ಯಾನಿಲಯದಿಂದ ತೇರ್ಗಡೆ ಹೊಂದಿದ ೨೪ ಅಭ್ಯರ್ಥಿಗಳು ಆಯೋಗಕ್ಕೆ ಅರ್ಜಿ ಸಲ್ಲಿಸಿದ್ದರು. ಗುಲ್ಬರ್ಗ ವಿಶ್ವವಿದ್ಯಾಲಯದ ೨೪ ಅಭ್ಯರ್ಥಿಗಳು ತಮ್ಮ ಅರ್ಹತಾ ಪರೀಕ್ಷೆಯಲ್ಲಿ ಪಡೆದಿರುವ ಸರಾಸರಿ ಶೇಕಡ ಅಂಕಗಳು ೫೧.೪೫ ರಿಂದ ೫೯.೩೧ರವರೆಗೆ ಇರುವುದು ಕಂಡುಬಂದಿದೆ. ಅವರಲ್ಲಿ ೩ ಅಭ್ಯರ್ಥಿಗಳನ್ನು ಆಯೋಗವು ಮುಖ್ಯ ಪಟ್ಟಿಯಲ್ಲಿ ಹಾಗೂ ೩ ಅಭ್ಯರ್ಥಿಗಳನ್ನು ಹೆಚ್ಚುವರಿ ಪಟ್ಟಿಯಲ್ಲಿ ಆಯ್ಕೆ ಮಾಡಿರುತ್ತದೆ,

ಈ ಹುದ್ದೆಗಳನ್ನು ಕರ್ನಾಟಕ ಸರ್ಕಾರಿ ಸೇವಾ ನೇರ ನೇಮಕಾತಿ ನಿಯಮಾವಳಿ ೧೯೭೩ರ ನಿಯಮ ೭ರಂತೆ ಆಯ್ಕೆ ಮಾಡಲಾಗಿದೆ. ಇದರ ಪ್ರಕಾರ ಅಭ್ಯರ್ಥಿಯು ಅರ್ಹತಾ ಪರೀಕ್ಷೆಯಲ್ಲಿ ಪಡೆದ ಎಲ್ಲಾ ವರ್ಷಗಳ ಸರಾಸರಿ ಅಂಕಗಳನ್ನು ಹಾಗೂ ಸಂದರ್ಶನದ ವೇಳೆಯಲ್ಲಿ ಕೊಟ್ಟ ಅಂಕಗಳನ್ನು ಸೇರಿಸಿ ಯಾವ ಅಭ್ಯರ್ಥಿಯು ಹೆಚ್ಚಾಗಿ ಅಂಕಗಳನ್ನು ಗಳಿಸಿರುವರೋ ಅಂತಹ ಅಭ್ಯರ್ಥಿಗೆ ವಿಾಸಲಾತಿ ಹುದ್ದೆ ಆಧಾರದ ಮೇಲೆ ಆಯ್ಕೆ ಮಾಡಲಾಗಿದೆ,

ಸಂದರ್ಶನದ ವೇಳೆಯಲ್ಲಿ ಆಯೋಗಕ್ಕೆ ವಿದ್ಯಾರ್ಥಿಗಳ ವಿವರಗಳನ್ನು ಆಕಾರಾದಿಯಾಗಿ ತಯಾರಿಸಿ ಹಾಗೂ ಅಭ್ಯರ್ಥಿಗಳನ್ನು ಆಕಾರಾಧಿಯಾಗಿ ಸಂದರ್ಶನಕ್ಕೆ ಕರೆಯಲಾಗುತ್ತದೆ. ಸಂದರ್ಶನದ ಸಮಯದಲ್ಲಿ ಅಭ್ಯರ್ಥಿಗಳು ಪಡೆದ ಅಂಕಗಳ ವಿವರಗಳು ಆಯೋಗವೇ ಹಿಂದೆ ತೆಗೆದುಕೊಂಡಿದ್ದ ತೀರ್ಮಾನದಂತೆ ಆಯೋಗ ಮಂಜೂದೆ ಇಡುವ ಹಾಗಿಲ್ಲ. ಅಭ್ಯರ್ಥಿಗಳಿಗೆ ಸಂದರ್ಶನದ ಸಮಯದಲ್ಲಿ ಅವರ ಯೋಗ್ಯತಾನುಸಾರ ಅಂಕಗಳನ್ನು ಆಯೋಗವು ಕೊಟ್ಟು ಆಯ್ಕೆ ಮಾಡಿರುತ್ತದೆ,

ಈ) ಪರಿಶೀಲಿಸಲಾಗುವುದು.

ಜಿಲ್ಲಾಮಟ್ಟದ ಹಾಗೂ ರಾಜ್ಯ ಮಟ್ಟದ ಪೋಲೀಸ್ ಅಧಿಕಾರಿಗಳಿಗೆ ರಹಸ್ಯ ಹಣ ಮಂಜೂರಾತಿ ಬಗ್ಗೆ

೪೨೩. ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಎಸ್.ಪಿ. ಹಾಗೂ ಮೇಲ್ಮಟ್ಟದ ಪೋಲೀಸ್ ಅಧಿಕಾರಿಗಳಿಗೆ ರಹಸ್ಯ ಹಣವನ್ನು ಮಂಜೂರು ಮಾಡುವ ಪದ್ಧತಿ ಇವೆಯೇ ?

ಆ) ಹಾಗಿದ್ದಲ್ಲಿ ಈ ಹಣವನ್ನು ಯಾವ ಯಾವ ಕೆಲಸಗಳಿಗಾಗಿ ಖರ್ಚು ಮಾಡಲಾಗುವುದು?

ಇ) ಯಾವ್ಯಾವ ಅಧಿಕಾರಿಗಳಿಗೆ ಒಂದು ವರ್ಷಕ್ಕೆ ಎಷ್ಟು ಹಣ ಮಂಜೂರು ಮಾಡಲಾಗುವುದು

ಈ) ಈ ರೀತಿ ಮಂಜೂರಾದ ಹಣವು ಲೆಕ್ಕ ಪರಿಶೋಧನೆಗೆ ಒಳಗಾಗುವುದೆ ಹಾಗಿಲ್ಲದಿದ್ದಲ್ಲಿ ಕಾರಣಗಳೇನು ?

ಶ್ರೀ ಆರ್. ಎಲ್. ಜಾಲಪ್ಪ (ಗೃಹ ಮಂತ್ರಿಗಳು).—

ಅ) ಹೌದು.

ಆ) ಮಾಹಿತಿಗಾರರಿಗೆ ರಹಸ್ಯ ಮಾಹಿತಿಗಳನ್ನು ಸಂಗ್ರಹಿಸಿ ಒದಗಿಸುವ ಸಲುವಾಗಿ ಬಹುಮಾನವಾಗಿ ಕೊಡಲು ಖರ್ಚು ಮಾಡಲಾಗುವುದು.

ಇ) ಪರಿಸ್ಥಿತಿ ಹಾಗೂ ಅವಶ್ಯಕತೆಗೆ ತಕ್ಕಂತೆ ಎಸ್.ಪಿ. ಹಾಗೂ ಮೇಲ್ಪಟ್ಟ ಅಧಿಕಾರಿಗಳಿಗೆ ಹಣ ಮಂಜೂರು ಮಾಡಲಾಗುವುದು.

ಈ) ಸಾಧಿಲ್ವಾರು ವೆಚ್ಚದ ಕೈಪಿಡಿ ನಿಯಮ ೪೭ರ ಪ್ರಕಾರ ಈ ರೀತಿಯ ರಹಸ್ಯ ವೆಚ್ಚದ ನಿಯಂತ್ರಣಾಧಿಕಾರಿ ಯಾವ ರೀತಿ ಲೆಕ್ಕ ಪತ್ರಗಳನ್ನು ಇಡಬೇಕು ಮತ್ತು ಅದರ ಪರಿಶೋಧನೆ ಯಾವ ರೀತಿ ಆಗಬೇಕೆಂದು ವಿವರವಾದ ನಿಬಂಧನೆಗಳನ್ನು ಮಾಡಲಾಗಿದೆ. ಅದರಂತೆ ಸದರಿ ಅಧಿಕಾರಿಯು ಪ್ರತಿಯೊಂದು ಹಣಕಾಸಿನ ವರ್ಷದಲ್ಲಿ ಕನಿಷ್ಟ ಒಂದು ಸಲ ನಿರ್ವಹಿಸಲಾದ ವೆಚ್ಚದ ಬಗ್ಗೆ ಸಮರ್ಪಕವಾದ ಹಾಗೂ ನಿಜವಾದ ಆಡಳಿತಾತ್ಮಕ ತನಿಖೆ ನಡೆಸಿ ಒಂದು ಪ್ರಮಾಣ ಪತ್ರವನ್ನು ಮಹಾ ಲೇಖಪಾಲರಿಗೆ ಕಳಿಸಬೇಕು. ಆದರೆ ರಹಸ್ಯ ಸೇವಾ ವೆಚ್ಚಗಳ ಲೆಕ್ಕ ಪತ್ರಗಳು ಲೆಕ್ಕ ಪರಿಶೋಧನಾ ಅಧಿಕಾರಿಯಿಂದ ಮಾಡಲಾಗುವ ಪರಿಶೋಧನೆಗೆ ಒಳಗಾಗುವುದಿಲ್ಲ.

ಸಂಡೂರಿನ ಆಸ್ಪತ್ರೆಯ ಮಂಕ್ಕಳ ತಜ್ಞರ ಬಗ್ಗೆ

೪೨೦. ಶ್ರೀ ಯಂ. ಭೂಪತಿ (ಸಂಡೂರು).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸಂಡೂರಿನಲ್ಲಿ ಮಕ್ಕಳ ಆಸ್ಪತ್ರೆಯ ಕಟ್ಟಡವು ಪೂರ್ಣಗೊಂಡಿದ್ದರೂ ಮಕ್ಕಳ ತಜ್ಞರು ಇಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಮಕ್ಕಳ ತಜ್ಞರ ಹುದ್ದೆ ಮಂಜೂರಾಗಿದೆಯೇ ?

ಇ) ಹಾಗಿಲ್ಲದಿದ್ದಲ್ಲಿ ಯಾವಾಗ ಹುದ್ದೆಯನ್ನು ಮಂಜೂರು ಮಾಡಿ ಭರ್ತಿ ಮಾಡಲಾಗುವುದು.

ಶ್ರೀ ಬಿ. ರಾಚಯ್ಯ (ಆರೋಗ್ಯ ಮಂತ್ರಿಗಳು).—

ಅ) ಬಂದಿದೆ.

ಆ) ಮಂಜೂರಾಗಿಲ್ಲ.

ಇ) ೧೯೮೭-೮೮ರಲ್ಲಿ ಹೆಚ್ಚುವರಿ ಸಿಬ್ಬಂದಿಗಳನ್ನು ಜಿಲ್ಲಾ ಪರಿಷತ್ ಮಾಂಖಾಂತರ ಒದಗಿಸುವ ಆಸ್ಪತ್ರೆಗಳ ಪಟ್ಟಿಯಲ್ಲಿ ಈ ಆಸ್ಪತ್ರೆಯನ್ನು ಸೇರಿಸಲಾಗಿದೆ.

ಆದಿತ್ಯಾ ಫೈನಾನ್ಸ್ ಆಂಡ್ ಇನ್ವೆಸ್ಟ್‌ಮೆಂಟ್ (ಇಂಡಿಯಾ) ಲಿಮಿಟೆಡ್ ಕುರಿತು

೬೧೯. ಶ್ರೀ ಉಪ್ಪಿನವರ್ (ಕುಂದಗೋಳ).—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕದಲ್ಲಿ ಆದಿತ್ಯಾ ಫೈನಾನ್ಸ್ ಆಂಡ್ ಇನ್ವೆಸ್ಟ್‌ಮೆಂಟ್ (ಇಂಡಿಯಾ) ಲಿಮಿಟೆಡ್ ಕಂಪನಿಯು ಠೇವಾದೇವಿ ಮಾಡಲು ಠೇವಾದೇವಿ ಕಾಯಿದೆ ಕೆಳಗೆ ಪರವಾನಿಗೆ ಪಡೆದಿತ್ತೇ, ಇಲ್ಲದಿದ್ದರೆ ಈ ಕಾನೂನಿನ ಪೇರೆ ಸರ್ಕಾರದವರು ಕೈಕೊಂಡ ಕ್ರಮವೇನು ?

ಆ) ಕಂಪನಿಯ ಎಲ್ಲ ಶಾಖೆಗಳು ಮಂಚ್ಚಿ ಚೇರ್‌ಮನ್ ಮತ್ತು ಡೈರೆಕ್ಟರರ ಮೇಲೆ ಸಾಕಷ್ಟು ಚೀರ್ಯಾದಿಗಳು ಆದರೂ ಕೂಡ ಅವರನ್ನು ಇನ್ನು ಬಂಧಿಸದಿರಲು ಕಾರಣಗಳೇನು ಕಂಪನಿಯಲ್ಲಿ ಕೆಲಸ ಮಾಡಿದ ಹತ್ತು ಸಾವಿರಕ್ಕೂ ಹೆಚ್ಚು ನೌಕರರ ನೌಕರಿಯು ಭದ್ರತೆಯ ಕುರಿತು ಸರಕಾರದ ಕ್ರಮವೇನು ? ಠೇವಣಿದಾರರ ಹಿಂಸೆ ತಾಳಲಾರದೇ ಆತ್ಮಹತ್ಯೆ